ಹುಬ್ಬಳ್ಳಿ-ಧಾರವಾಡ ಮಧ್ಯೆ ವಿಮಾನ ನಿಲ್ದಾಣ

೯೭೮. ಶ್ರೀ ಕೆ.ಬಿ ಕೋಳಿವಾಡ (ರಾಣಿಬೆನ್ನೂರು).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಹುಬ್ಬಳ್ಳಿ-ಧಾರವಾಡಗಳ ಮಧ್ಯೆ ವಿಮಾನ ನಿಲ್ದಾಣ ಸ್ಥಾಪಿಸುವ ಯೋಜನೆ ಯಾವ ಹಂತದಲ್ಲಿದೆ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು)—

ಹುಬ್ಬಳ್ಳಿಯಲ್ಲಿ ನಿರ್ಮಿಸಲಾಗುತ್ತಿರುವ ವಿಮಾನ ನಿಲ್ದಾಣದ ರನ್‌ವೇ ಟ್ಯಾಕ್ಸಿ ಟ್ರ್ಯಾಕ್ ಮತ್ತು ಏಪ್ರನ್‌ಗೆ ಸಂಬಂಧಿಸಿದಂತೆ ಗ್ರೇಡ್ ೧ ಖಡಿ ಕೆಲಸ ಮುಗಿದಿದ್ದು ಗ್ರೇಡ್ ೨ ಮತ್ತು ೩ ಖಡಿ ಕೆಲಸ ಪ್ರಗತಿಯಲ್ಲಿವೆ ಮತ್ತು ಎಲ್ಲ ಸಿ.ಡಿ. ಕೆಲಸಗಳು ಮುಗಿದಿವೆ. ಟರ್ಮಿನಲ್ ಕಟ್ಟಡದ ಕೆಲಸವು ಮಾಳಿಗೆ ಹುತದವರೆಗೂ ಬಂದಿದ್ದು ಮಾಳಿಗೆ ಕೆಲಸ ಪ್ರಗತಿಯಲ್ಲಿದೆ. ಕಾರು ನಿಲ್ದಾಣ ಮತ್ತು ಒಳರಸ್ತೆಗಳ ಗ್ರೇಡ್ ೧ ಮತ್ತು ೨ ಖಡಿ ಕೆಲಸ ಮುಗಿದಿದ್ದು ಡಾಂಬರ ಕೆಲಸ ಮಾಡಬೇಕಾಗಿದೆ. ಈ ಕೆಲಸಗಳಿಗೆ ಡಿಸೆಂಬರ್ ೧೯೮೭ರವರೆಗೆ ೮೨.೬೧ ಲಕ್ಷ ರೂ. ಖರ್ಚಾಗಿದೆ.

ಮಾಲೂರು ನಗರಕ್ಕೆ ಪ್ರಥಮ ದರ್ಜೆ ಕಾಲೇಜು

೯೭೦. ಶ್ರೀ ಹೆಚ್ ಬಿ. ದ್ಯಾವರಪ್ಪ (ಮಾಲೂರು) —ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮಾಲೂರು ನಗರದಲ್ಲಿ ಕಿರಿಯ ಕಾಲೇಜಿದ್ದು ಅಲ್ಲಿ ಪ್ರಥಮ ದರ್ಜೆ ಕಾಲೇಜು ಸ್ಥಾಪಿಸುವ ಬಗ್ಗೆ ಸದನದಲ್ಲಿ ಹಾಗೂ ಹೊರಗೆ ಒತ್ತಾಯಿಸಿರುವುದು ನಿಜವೇ ?

ಆ) ಈ ಬಗ್ಗೆ ಪ್ರಥಮ ದರ್ಜೆ ಕಾಲೇಜನ್ನು ಸ್ಥಾಪಿಸುವ ಬಗ್ಗೆ ವಿಶ್ವವಿದ್ಯಾನಿಲಯದಿಂದ ನೊಂದಣಿ ಮೊತ್ತವನ್ನು ಕಟ್ಟಿದಾಗ್ಯೂ ಇದುವರೆಗೆ ಸರ್ಕಾರದವರ ಆದೇಶವಾಗಿಲ್ಲದಿರುವುದಕ್ಕೆ ಕಾರಣವೇನು ;

ಇ) ಈ ವರ್ಷದಿಂದಲಾದರೂ ಪ್ರಥಮ ದರ್ಜೆ ಕಾಲೇಜನ್ನು ಸ್ಥಾಪಿಸಲು ಸರಕಾರದವರು ಸೂಕ್ತ ಕ್ರಮ ತೆಗೆದುಕೊಳ್ಳುವರೆ ?

ಶ್ರೀ ಜೀವರಾಜ್ ಆಳ್ವ (ಉನ್ನತ ಶಿಕ್ಷಣ ಮಂತ್ರಿಗಳು)

ಅ) ನಿಜ.

ಆ) ೧೯೮೮-೮೯ನೇ ಸಾಲಿನಲ್ಲಿ ಸ್ಥಾಪಿಸಲು ಉದ್ದೇಶಿಸಿದೆ. ಹಾಗೂ ಈ ಹಿಂದೆ ಕಟ್ಟಿದ ನೊಂದಣಿ ಮೊತ್ತವನ್ನು ಈ ಸಾಲಿಗೆ ಹೊಂದಿಸಿಕೊಳ್ಳಲಾಗುವುದು.

ಇ) ತೆಗೆದುಕೊಳ್ಳಲಾಗುವುದು.

ಕಬಿನಿ ಎರಡನೇ ಹಂತದ ಬಗ್ಗೆ

೯೧೧. ಶ್ರೀ ಹೆಚ್. ಪಿ. ಮಹದೇವಪ್ಪ (ಟಿ. ನರಸೀಪುರ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮೈಸೂರು ಜಿಲ್ಲೆಯಲ್ಲಿ ಕಬಿನಿ ಎರಡನೇ ಹಂತದ ಕಾಮಗಾರಿ ಕೆಲಸವು ಪ್ರಾರಂಭವಾಗಿದೆಯೇ ?

ಆ) ಹಾಗಿದ್ದಲ್ಲಿ ಈ ಕಾಮಗಾರಿಗೆ ಬಿಡುಗಡೆಯಾದ ಹಣವೆಷ್ಟು ?

ಇ) ಕಬಿನಿ ಅಣೆಕಟ್ಟು ನಾಲೆಗಳಾದ ರಾಂಪುರ ನಾಲೆ ಹುಲ್ಲಳ್ಳಿ ನಾಲೆ ಹಾಗೂ ಕೆ.ಆರ್.ಎಸ್.ನ ವಿರಜಾ ನಾಲೆಯ ರಾಜಪರಮೇಶ್ವರಿ ಹಾಗೂ ಹಾರೋಹಳ್ಳಿಯ ಕೆಳ ಹಾಗೂ ಮೇಲ್ಮಟ್ಟದ ನಾಲೆಗಳು